International Journal of Kannada Research 2020; 6(1): 157-161

International Journal of Kannada Research
www.kannadajournal.com

**ISSN: 2454–5813**
IJKR 2020; 6(1): 157-161
© 2020 IJKR
www.kannadajournal.com
Received: 19-11-2019
Accepted: 21-12-2019

**ಡಾ. ಪೂರ್ಣಿಮ ಎಸ್.**
ಕನ್ನಡ ಮುಖ್ಯಸ್ಥರು, ಶೇಷಾದ್ರಿಪುರಂ ಇನ್ಸ್‌ಟಿಟ್ಯೂಟ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್ ಕಾಲೇಜ್, ಶೇಷಾದ್ರಿಪುರಂ, ಬೆಂಗಳೂರು

**Corresponding Author:**
**ಡಾ. ಪೂರ್ಣಿಮ ಎಸ್.**
ಕನ್ನಡ ಮುಖ್ಯಸ್ಥರು, ಶೇಷಾದ್ರಿಪುರಂ ಇನ್ಸ್‌ಟಿಟ್ಯೂಟ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್ ಕಾಲೇಜ್, ಶೇಷಾದ್ರಿಪುರಂ, ಬೆಂಗಳೂರು

# ಹರಿ–ಹರ–ಹಜರತ್‌ಗಳ ಸಂಸ್ಕೃತಿ ಸಂಗಮ

**ಡಾ. ಪೂರ್ಣಿಮ ಎಸ್.**

**ಸಂಸ್ಕೃತಿಯ ವ್ಯಾಖ್ಯಾನಗಳು**

ಸಂಸ್ಕೃತಿಯಲ್ಲಿ ವಿರಾಟ್ ಶಕ್ತಿ ಹುದುಗಿದೆ. ಅದನ್ನು ಸೀಮಿತ ಅರ್ಥದ ಸೀಮಿತ ಪದಗಳಲ್ಲಿ ತಿಳಿಸುವುದು ಬಹುಕಷ್ಟ. ಆದರೆ ಅದು ಹೃದಯಕ್ಕೆ ವೇದ್ಯವಾಗಬಲ್ಲದು.

"ಜಗತ್ತಿನಲ್ಲಿ ಯಾವುದನ್ನು ಸರ್ವೋತ್ತಮ ವಿಚಾರಗಳೆಂದು ತಿಳಿಯಲಾಗಿದೆಯೇ ಅಥವಾ ಹೇಳಲಾಗಿದೆಯೋ ಅವುಗಳಲ್ಲಿ ಅತ್ಯುತ್ತಮವಾಗಿ ಗುರುತಿಸಿಕೊಳ್ಳುವುದೇ ಸಂಸ್ಕೃತಿ".

"ಸಂಸ್ಕೃತಿ ಎಂಬುದು ಶಾರೀರಿಕ ಅಥವಾ ಮಾನಸಿಕ ಶಕ್ತಿಗಳ ಪ್ರಶಿಕ್ಷಣ, ದೃಢೀಕರಣ ಅಥವಾ ವಿಕಾಸ ಅಥವಾ ಅವುಗಳಿಂದ ಉತ್ಪನ್ನವಾಗುವ ಅವಸ್ಥೆಯೇ ಆಗಿದೆ".

"ಮನ, ಆಚಾರ ಅಥವಾ ಅಭಿರುಚಿಗಳ ಪರಿಷ್ಕೃತಿ ಅಥವಾ ಶುದ್ಧಿಯೇ ಸಂಸ್ಕೃತಿ".

ಶುದ್ಧ ಪ್ರಾಕೃತಿಕನಾಗಿದ್ದ ಮಾನವ ಕಾಲಾನುಕ್ರಮದಲ್ಲಿ ತನ್ನ ಅನುಭವದಿಂದ ಪಡೆದ ಸುಧಾರಿತ ಅಥವಾ ಸುಸಂಸ್ಕೃತ ಪರಿಣಾಮವನ್ನೇ ಸಂಸ್ಕೃತಿ ಎನ್ನಬಹುದು".

–ಹೀಗೆ ಸಂಸ್ಕೃತಿಯ ಬಗ್ಗೆ ಅನೇಕ ಪರಿಭಾಷೆಗಳಿವೆ. ಆದರೆ ಮಾನವ ಶಾಸ್ತ್ರಜ್ಞರು 'ಸಂಸ್ಕೃತಿ' ಮತ್ತು 'ನಾಗರಿಕತೆ' ಎಂಬ ಪದಗಳಲ್ಲಿ ಹೆಚ್ಚು ಅರ್ಥವ್ಯತ್ಯಾಸವನ್ನೇನು ಕಾಣದೆ ಉಪಯೋಗಿಸುತ್ತಾರೆ. ಆದರೆ ಆ ಎರಡು ಪದಗಳಿಗೂ ಸೂಕ್ಷ್ಮ ವ್ಯತ್ಯಾಸಗಳಿವೆ. ಅವೆರಡನ್ನು ಪರಸ್ಪರ ಹೋಲಿಸಿ ನೋಡಿದಾಗ ಮಾತ್ರ ಸ್ಪಷ್ಟಸ್ವರೂಪ ಅರ್ಥವಾಗುವುದು. ಸಂಸ್ಕೃತಿ ಮಾನವನ ಅಂತರಂಗದ ಜೀವನಕ್ಕೆ ದರ್ಪಣವಾದರೆ, ನಾಗರಿಕತೆ ಅವನ ಬಹಿರಂಗಜೀವನಕ್ಕೆ ಸಂಬಂಧಿಸಿರುತ್ತದೆ.

"ತಿದ್ದಿದನಂಬಿಕೆ, ತಿದ್ದಿದ ತಿಳಿವಳಿಕೆ, ತಿದ್ದಿದ ನಡವಳಿಕೆ ಈ ಮೂರು ಮುಪ್ಪುರಿಗೊಂಡ ಮನುಷ್ಯನ ಸದ್ವರ್ತನೆಯೇ ಸಂಸ್ಕೃತಿ". ಶಿಶುನಾಳ ಶರೀಫರು ತಮ್ಮ ಜನ್ಮತಃ ಬಂದಿದ್ದ ಸೂಫಿಸಂಸ್ಕೃತಿ ಬಗೆಗಿದ್ದ ನಂಬಿಕೆಗಳನ್ನು ತಿದ್ದಿಕೊಂಡು, ಗುರು ಗೋವಿಂದರಿಂದ ಸನಾತನ ವೈದಿಕ ಮತದ ಬ್ರಹ್ಮತತ್ವಗಳನ್ನು ತಿಳಿದು ತಿದ್ದಿಕೊಂಡು ತಮ್ಮ ಪರಿಸರದಲ್ಲಿ ಪ್ರಭಾವಕಾರಿಯಾಗಿದ್ದ ವೀರಶೈವ ಲಿಂಗತತ್ವಗಳ ನಡವಳಿಕೆಗಳಲ್ಲಿ ಕೆಲವನ್ನು ತಿದ್ದಿ ತೀಡಿ ಅಳವಡಿಸಿಕೊಂಡು ಸರ್ವಧರ್ಮ ಸಂಸ್ಕೃತಿಗಳನ್ನು ಸಂಗಮಿಸಿಕೊಂಡ ಸಾಕಾರ ಮೂರ್ತಿಗಳು.

**ಹಜರಜ್ ಸಂಸ್ಕೃತಿ**

ಹಜರಜ್ ಸಂಸ್ಕೃತಿ ಎಂದರೆ ಇಸ್ಲಾಂ ಸಂಸ್ಕೃತಿ. ಶಿಶುನಾಳ ಶರೀಫರಿಗೆ ಇದು ಜನ್ಮತಃ ಬಂದ ಸಂಸ್ಕೃತಿಯಾಗಿತ್ತು. ತಂದೆ ದೇವಕಾರ ಮನೆತನದ ಇಮಾಮ್ ಹಜರತ್ ಸಾಹೇಬರು ಮತ್ತು ತಾಯಿ ಹಜ್ಜೂಮಾರವರಿಗೆ ಮದುವೆಯಾಗಿ ಬಹುಕಾಲ ಮಕ್ಕಳ ಸಂತಾನವಿರಲಿಲ್ಲ. ದೇವರ ಹರಕೆ ಮುಂತಾದ ಪ್ರಯತ್ನಗಳ ತರುವಾಯ ಹಿತೈಶಿಗಳ ಸಲಹೆಯ ಮೇರೆಗೆ ಹಲಗೂರು ಅಥವಾ ಹುಲಗೂರಿನ ಸಂತ ಹಜರೇಶ ಖಾದ್ರಿ ಅಥವಾ ಖಾದರ ಷಾವಲಿ ಸಮಾಧಿಗೆ ಭಕ್ತಿಯಿಂದ ಮೊರೆಯಿಟ್ಟಾಗ ಹಜರೇಶಖಾದ್ರಿ ಕೃಪೆಯಿಂದಾಗಿ ಲೋಕೋದ್ಧಾರಕ ಒಬ್ಬ ಮಗನಾಗಿ ಕ್ರಿ.ಶ.೧೮೧೯ ಮಾರ್ಚ್ ೭ರಂದು ಜನಿಸಿದರು. ಅವನಿಗೆ ಶರೀಫ ಎಂದು ಹೆಸರಿಟ್ಟರು 'ಶರೀಫ' ಎಂಬುದು ಪಾರ್ಸಿ ಅಥವಾ ಪರ್ಶಿಯನ್ ಶಬ್ದ. 'ಶರೀಫ' ಎಂಬುದರ ಅರ್ಥ ಉದಾತ್ತ ಧ್ಯೇಯಗಳ ಅಥವಾ ಉತ್ತಮ ಶೀಲ ಸ್ವಭಾವವನ್ನು ಹೊಂದಿ ತುಂಬಾ ಸಂಭಾವಿತರಾಗಿ ಗೌರವಾನ್ವಿತರಾಗಿ ಜಗತ್ತಿನ ಗೌರವಕ್ಕೆ ಯಾರು ಪಾತ್ರರಾಗುತ್ತಾರೊ ಅಂಥವರಿಗೆ 'ಶರೀಫ' ಎನ್ನುತ್ತಿದ್ದರು. ಹಿಂದಿ ಭಾಷೆಯಲ್ಲೂ ಕೂಡ 'ಶರೀಫಮನುಷ್ಯ' ಎಂದರೆ ಒಳ್ಳೆಮನುಷ್ಯ ಎಂದರ್ಥವಿದೆ. ಬಾಂಬೆಯಲ್ಲಿ "ಶರೀಫ ಫಾರ್ ಬಾಂಬೆ" ಎಂಬ ಪದ್ಧತಿ ಇದ್ದೂ ಎಲ್ಲರ ಗೌರವಕ್ಕೆ ಪಾತ್ರರಾದವರು ಎಂದರ್ಥ.

ಆ ದೃಷ್ಟಿಯಿಂದ ಶರೀಫರ ಹೆಸರು ಅನ್ವರ್ಥಕವಾದುದಾಗಿದೆ. ಶರೀಫರನ್ನು ಶರೀಫಸಾಹೇಬರು, ಶರೀಫಜ್ಜ, ಶರೀಫ ಶಿವಯೋಗಿ, ಕರ್ನಾಟಕದ ಕಬೀರರೆಂದು ಭಕ್ತಿಯಿಂದ ಕರೆಯುವುದು ವಾಡಿಕೆ. ಶರೀಫ ಶಿಗ್ಗಾವಿ ತಾಲ್ಲೋಕು ಶಿಶುನಾಳ ಗ್ರಾಮದವರಾದ್ದರಿಂದ ಶಿಶುನಾಳ ಶರೀಫ ಎಂದು ಪ್ರಸಿದ್ದನಾಗಿದ್ದನಲ್ಲದೆ ಆ ಶಿಶುನಾಳ ಗ್ರಾಮದ ಹೆಸರು ಪ್ರಸಿದ್ಧವಾಗಿ ಉಳಿಯಲು ಕಾರಣ ಶರೀಫರೆ.

**ಹಜರೇಶಖಾದ್ರಿ/ಖಾದರ ಷಾವಲಿ**

ಮುಸ್ಲಿಂರಾಗಿದ್ದ ಹಜರೇಶಖಾದ್ರಿ ಅವರನ್ನು ಜನರೆಲ್ಲ ಪ್ರೀತಿಯಿಂದ 'ಖಾದರಲಿಂಗ' ಎನ್ನುತ್ತಿದ್ದರು. ಏಕೆಂದರೆ ವೀರಶೈವರಿಗೂ ತಮ್ಮ ವೀರಶೈವ ಧರ್ಮದಲ್ಲೇನಾದರೂ ಅನುಮಾನ ಸಂಶಯಗಳಿದ್ದರೆ ಖಾದ್ರಿ ಅವರನ್ನು ಕೇಳುತ್ತಿದ್ದರಂತೆ. ಅಂದರೆ ಅಷ್ಟು ಚೆನ್ನಾಗಿ ವೀರಶೈವ ಧರ್ಮವನ್ನು ಹಜರೇಶಖಾದ್ರಿ ಅವರು ತಿಳಿದುಕೊಂಡಿದ್ದರಾದರೂ ಯಾರೋ ಒಬ್ಬರು ಹಜರೇಶಖಾದ್ರಿ ಅವರಿಗೆ ನೀನು ವೀರಶೈವಧರ್ಮದ ಬಗ್ಗೆ ಚೆನ್ನಾಗಿ ಅರಿತುಕೊಂಡಿರ ಬಹುದು ಆದರೆ ಆ ವೀರಶೈವಧರ್ಮದ ನೈಜಶಕ್ತಿ ನಿನ್ನಲಿಲ್ಲ ಎಂದಾಗ ಹಜರೇಶಖಾದ್ರಿ ಅವರು ಹಠದಿಂದ ಒಬ್ಬರಿಗೆ ಲಿಂಗದೀಕ್ಷೆಯನ್ನು ಸಹ ಕೊಟ್ಟುಬಿಟ್ಟರು. ಲಿಂಗದೀಕ್ಷೆಯನ್ನು ಪಡೆದ ಆ ಶಿಷ್ಯನು ಸಹ ಒಪ್ಪಿಕೊಂಡು ನಡೆದುಬಿಟ್ಟ. ಹಜರೇಶಖಾದ್ರಿ ಲಿಂಗದೀಕ್ಷೆಕೊಟ್ಟದ್ದು ಖಾತ್ರಿಯಾದ್ದರಿಂದ 'ಖಾದರಲಿಂಗ' ಎಂದು ಹೆಸರಾಯಿತು. ಇಂಥ 'ಖಾದರಲಿಂಗ'ರ ಮಹಿಮೆಯ ವರಪ್ರಸಾದವೇ ಶಿಶುನಾಳಶರೀಫರು. ಶರೀಫರು ಪ್ರತಿಕ್ಷಣವು ಪ್ರತಿಯೊಂದು ಕಾರ್ಯದಲ್ಲೂ 'ಯಾ ಖಾದರ್' ಎಂದು ಸ್ಮರಿಸುವುದಲ್ಲದೆ ಖಾದರ ಷಾವಲಿ ಸಮಾಧಿಗೆ ಭೇಟಿನೀಡುತ್ತ "ನಡೆಯೋ ದೇವರ ಚಾಕರಿಗೆ ಮುಕ್ತಿ- ಗೊಡೆಯ ಖಾದರಲಿಂಗ ನೆಲಸಿರ್ಪ ಗಿರಿಗೆ ಖಾದರಿ ಸದಾವರಿ ನಿತ್ಯ ನಿರಂಜನಾವರಿ" ಎಂಬ ತತ್ವಪದಗಳ ಮೂಲಕ ಭಕ್ತಿಭಾವಗಳನ್ನು ಸಮರ್ಪಿಸಿದರು.
ಹರ ಸಂಸ್ಕೃತಿ

**ಶಿಶುನಾಳ ಗ್ರಾಮ ಮತ್ತು ಶಿಶುನಾಳೇಶ್ವರ**

ಶಿಶುನಾಳ ಹಾವೇರಿ ಜಿಲ್ಲೆಯ ಶಿಗ್ಗಾವಿ ತಾಲ್ಲೊಖಿನ ಗ್ರಾಮ. ಬೆಂಗಳೂರಿನಿಂದ ಪೂಣೆ ರೈಲಿನಲ್ಲಿ ಪ್ರಯಾಣಿಸಿದರೆ ಗೂಡಗೇರಿ ನಿಲ್ದಾಣದಲ್ಲಿ ಇಳಿದು ಒಳಗೆ ನಾಲ್ಕೈದು ಮೈಲಿ ಹೊದರೆ ಸಣ್ಣಹಳ್ಳಿ ಶಿಶುನಾಳ. ಈ ಊರಿಗೆ ಪ್ರವೇಶಿಸಿದಾಗ ಸ್ತಂಭ ಮೂರ್ತಿ ಬಸವಣ್ಣ ಇದೆ. ಅದಕ್ಕೆ ಎಲ್ಲಾ ಜಾತಿ, ಧರ್ಮ, ವರ್ಗ ಇತ್ಯಾದಿ ಭೇದವಿಲ್ಲದೆ ನಮಸ್ಕಾರ ಮಾಡುತ್ತಾರೆ. ಸ್ತಂಭಮೂರ್ತಿ ಬಸವಣ್ಣನೆ ಶಿಶುನಾಳ ಊರಿನ ಆರಾಧ್ಯದೇವ. ಅಲ್ಲಿನ ಪ್ರಮುಖ ಜನಾಂಗಗಳೆಂದರೆ ವೀರಶೈವ ಮತ್ತು ಮುಸ್ಲಿಂ. ಉಳಿದಂತೆ ಬೇರೆ ಬೇರೆ ಜಾತಿಗಳವರು ಸಣ್ಣ ಪ್ರಮಾಣದಲ್ಲಿದ್ದರೂ ಬಹುಪಾಲು ಸಂಖ್ಯೆಯಲ್ಲಿರುವವರು ಲಿಂಗಾಯತರು ಮತ್ತು ಮುಸ್ಲಿಂರು. ಇವರು ಎಷ್ಟು ಅನ್ಯೂನತೆಯಿಂದ ಇರುತ್ತಿದ್ದರೆಂದರೆ ಈಶ್ವರನಗುಡಿ ಸ್ವಚ್ಛಗೊಳಿಸುವ ಬುಡನ್ ಸಾಬನಿಗೆ ಅವನ ಹೆಸರಿನ ಅರ್ಥ ಕೇಳಿದರೆ ನನಗೊತ್ತಿಲ್ರಿ ಮನೆಗೊತ್ತಿರಬೇಕು ಎನ್ನುತ್ತಿದ್ದ. ಆ ಬುಡನ್ ಸಾಬ ಹಿಂದು ಧರ್ಮದ ಈಶ್ವರಗುಡಿಯನ್ನು ಸ್ವಚ್ಛಗೊಳಿಸುವ ಕಾಯಕಕ್ಕೆ ಅನ್ಯಜಾತಿಯವರ ತಕರಾರಿಲ್ಲ. ಆ ಬುಡನ್ ಸಾಬನಿಗೂ ತನ್ನ ಧರ್ಮಾನುಸಾರ ತಾನು ನಮಾಜ್ ಮಾಡಲೇಬೇಕು ಎಂಬುದಿಲ್ಲ. ಈ ರೀತಿ ಶಿಶುನಾಳದಲ್ಲಿ 'ಧರ್ಮ' ಎಂಬುದು ಎಲ್ಲಾ ಜಾತಿಗಳವರನ್ನು ಪರಸ್ಪರ ಬೆಸೆಯುವ ಪ್ರೀತಿ ವಿಶ್ವಾಸಗಳನ್ನು ಬೆಳೆಸುವ ಜೊತೆಗೂಡಿ ಹಬ್ಬಹರಿದಿನಗಳನ್ನು ಎಲ್ಲರು ಕೂಡಿ ಚೆನ್ನಾಗಿ ಆಚರಿಸುವ ಕೊಂಡಿಯಾಗಿತ್ತು. ಬಕ್ರೀದ್, ರಂಜಾನ್ ಮತ್ತು ಮೊಹರಾಂ ಹಬ್ಬದಲ್ಲಿ ಹಿಂದುಗಳು ಆಸಕ್ತಿಯಿಂದ ಭಾಗವಹಿಸುತ್ತಿದ್ದರು. ಹತ್ತು ದಿನಗಳ ಆಚರಣೆಯ ಮೊಹರಂ ಹಬ್ಬ ಮಸೀದಿಯ ಬಳಿ ಹೊಲೆಯರ ತಮಟೆ ಬಾರಿಸುವ ಮೂಲಕ ಮೊದಲ ದಿನಕ್ಕೆ ಚಾಲನೆ ಸಿಗುತ್ತಿತ್ತು. ನಾಲ್ಕನೆ ದಿನ ತಮಟೆ ಜೊತೆ ಹುಲಿವೇಷ ಹಾಕಿದ ಮನುಷ್ಯನ ಮೆರವಣಿಗೆ ಬೀದಿ ಬೀದಿಗಳಲ್ಲಿ ಬರುವ ಸದ್ದನ್ನು ಕೇಳಿದ ಕೂಡಲೇ ಊರಿನ ಹಿಂದು ಮುಸ್ಲಿಂ ಹಿರಿಯರು–ಕಿರಿಯರು ಎನ್ನದೆ ಎಲ್ಲರು ಬಂದು ಸೇರುತ್ತಿದ್ದರು. ಮುಸಲ್ಮಾನ ಸ್ತ್ರೀ ಪುರುಷರು ಹುಡುಗರು ಎಷ್ಟು ಉತ್ಸಾಹದಿಂದ ಮುಸಲ್ಮಾನರ ಹಬ್ಬಗಳಲ್ಲಿ ಭಾಗಿಗಳಾಗುತ್ತಿದ್ದರೋ ಹಿಂದುಗಳೂ ಅಷ್ಟೇ ಉತ್ಸಾಹದಿಂದ ಭಾಗಿಗಳಾಗುತ್ತಿದ್ದರು. ಇಂಥ ಅಪೂರ್ವ ಸನ್ನಿವೇಶದಿಂದಾಗಿ ಹಿಂದು ಮುಸಲ್ಮಾನರ ಬಾಂಧವ್ಯ ಯಾವಾಗಲೂ ಮಧುರವಾಗಿಯೇ ಇತ್ತು. ಯಾವ ಮತವಾದರೂ ಸತ್ಯ, ಧರ್ಮ, ಪರೋಪಕಾರವನ್ನು ಬೋಧಿಸುವುದರಿಂದ, ಎಲ್ಲ ಮತಗಳವರೂ ಎಲ್ಲ ಮತಗಳವರ ಹಬ್ಬ ಧಾರ್ಮಿಕ ಕಾರ್ಯಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ಸರ್ವಧರ್ಮ ಸಮನ್ವಯತೆಯಿಂದ ಕೂಡಿದ ಗ್ರಾಮ ಶಿಶುನಾಳ ಆಗಿತ್ತು.

ಲಿಂಗಾಯತಧರ್ಮಕ್ಕೆ ಸೇರಿದ ಜಂಗಮರು ಯಾವುದಾದರು ಗುಡಿ, ಮಠ ಇತ್ಯಾದಿಗಳಲ್ಲಿ ಪಾಠಗಳನ್ನು ಮಾಡುತ್ತಿದ್ದರು. ಶರೀಫನನ್ನು ತಂದೆ ಇಮಾಮ್ ಸಾಬ್ ಹತ್ತಿರದ 'ಐನೂರ್ರ' ಶಾಲೆಗೆ ಸೇರಿಸಿದ. ಇಲ್ಲಿ ತಂದೆ ಮನಸ್ಸುದೊಡ್ಡದಾಗಿದ್ರೆ ಕೈ ಹಿಡಿದು ನಡೆಯುವ ಮಕ್ಕಳ ಮನಸ್ಸುದೊಡ್ಡದಾಗಿರುತ್ತೆ ಎಂಬುದಕ್ಕೆ ಸಾಕ್ಷಿಯಾಗಿದೆ. ಐನೋರ್ರ ಶಾಲೆಯಲ್ಲಿ ಲೆಕ್ಕ, ಓದು, ಬರಹ, ಚಾಮರಸನ ಪ್ರಭುಲಿಂಗಲೀಲೆ, ಶಿವಪುರಾಣ, ಹರಿಹರನ ರಗಳೆ ಮುಂತಾದವುಗಳನ್ನು ಕಲಿಸುತ್ತಿದ್ದರು. ಶರೀಫನೂ ಆಸಕ್ತಿಯಿಂದ ಎಲ್ಲವನ್ನು ಕಲಿತ. ಐನೋರ್ರ ಶಾಲೆಯ ಮುಖ್ಯಸ್ಥರಾಗಿದ್ದ ಸಿದ್ಧರಾಮಯ್ಯನವರು ಶರೀಫನ ಜಾಣತನ ನೋಡಿ ಸಾಧ್ಯವಾದಷ್ಟು ಹೆಚ್ಚಿಗೆ ಕಲಿಸಿದರಂತೆ. ಇತರ ಹುಡುಗರಿಗಿಂತ ಶರೀಫನಿಗೆ ಪ್ರಭುಲಿಂಗಲೀಲೆ, ಬಸವಣ್ಣ, ಅಕ್ಕಮಹಾದೇವಿ, ವಚನ ಇತ್ಯಾದಿ ಚೆನ್ನಾಗಿ ಕಲಿಸಿದ್ರು. ಶರೀಫ ಬೆಳೆದಂತೆ ಇಸ್ಲಾಂಧರ್ಮದೊಂದಿಗೆ ವೀರಶೈವಧರ್ಮದ ಎಲ್ಲಾ ಆಚಾರ ವಿಚಾರಗಳನ್ನು ತಿಳಿದು ಒಳ್ಳೆ ಪ್ರಬುದ್ಧನಾದ. "ಶರೀಫರು ಚಿಕ್ಕಂದಿನಲ್ಲಿ ಸ್ಥಳೀಯ ಹಿರೇಮಠದ ಸಿದ್ಧರಾಮಯ್ಯನವರ ಸಹಾಯ ಸಹಕಾರಗಳಿಂದ ವೀರಶೈವಧರ್ಮ ಕುರಿತು ಆಳ ಅಧ್ಯಯನ ಮಾಡಿದಲ್ಲದೆ ಕಲ್ಯಾಣದ ಬಸವಣ್ಣನವರ ಭಕ್ತಿಯ ಒಲ್ಮೆಗೆ, ಪ್ರಭುದೇವರ ಆತ್ಮಾನುಸಂಧಾನಕ್ಕೆ ಮಾರು ಹೋಗಿದ್ದ ಶರೀಫರು 'ಬಸವಣ್ಣನಂಥ ಭಕ್ತನಿಲ್ಲ; ಪ್ರಭುದೇವರಂಥ ಪರಮಾತ್ಮನಿಲ್ಲ' ಎಂದು ಉದ್ಗಾರ ತೆಗೆದರು. ಬಸವನ ಭಕ್ತಿಮಾರ್ಗವನ್ನುಎತ್ತಿ ಹಿಡಿದ ಶರೀಫರು ಕಲ್ಯಾಣದ ಬಸವಣ್ಣನನ್ನು ಶಿಶುನಾಳದ ಬಯಲು ಗುಡಿಯಲ್ಲಿ ಸ್ತಂಭವೇರಿ ಕುಳಿತು ಸರ್ವರಿಂದ ಪೂಜೆಗೊಳ್ಳಲ್ಪಡುತ್ತಿರುವ ಬಸವಣ್ಣ–ಶಿಶುನಾಳಧೀಶನಲ್ಲಿ ಕಂಡುಕೊಂಡು ತಮ್ಮೆಲ್ಲ ಕಾವ್ಯಗಳಿಗೆ ಆ ಶಿಶುನಾಳಧೀಶನೇ ಸ್ಫೂರ್ತಿಯ ಸೆಲೆಯಾಗಿರುವನೆಂದು ಶರೀಫರು ಭಾವಿಸಿ ಆತನ ಹೆಸರಿನಲ್ಲಿಯೇ ಕಾವ್ಯ ರಚಿಸಿ ಬೋಧೆಗಿಳಿದರು"೧. ಅಲ್ಲದೆ ಬಸವಣ್ಣನವರನ್ನು ಕುರಿತು 'ಬಸವೇಶ್ವರದಂಡಕ'ವನ್ನು ಶರೀಫರು ರಚಿಸಿದರು. ಅಕ್ಕಮಹಾದೇವಿಯು ಶ್ರೀಶೈಲ ಚೆನ್ನಮಲ್ಲಿಕಾರ್ಜುನನಲ್ಲಿ ತನ್ನನ್ನೇ ತಾನು ಸಮರ್ಪಿಸಿಕೊಂಡು ಸತಿಪತಿಭಾವ ಪ್ರಕಟಿಸಿದಂತೆ ಶರೀಫರು ಸಹ ತಮ್ಮ ಮತ್ತು ತಮ್ಮ ಗುರುವಿನ ಕುರಿತಂತೆ ಸತಿಪತಿಭಾವ ವ್ಯಕ್ತಪಡಿಸಿರುವುದಕ್ಕೆ ಉದಾಹರಣೆಯಾಗಿ ೧. "ಎಲ್ಲರಂಥವನಲ್ಲ ಎನಗಂಡ.. ೨. "ನನ್ನೊಳಗ ನಾ ತಿಳಿಕೊಂಡೆ" ಮೊದಲಾದ ತತ್ವಪದಗಳ ಮೂಲಕ ಸಮನ್ವಯಿಕೊಂಡಿರುವುದನ್ನು ಗುರುತಿಸಬಹುದು.

ಶರೀಫರು ಚೆನ್ನ ಬಸವಣ್ಣನ ತಾಣವಾದ ಉಳವಿಗೂ ಹೋಗಿ ಬಂದರು. ಉಳವಿಗೆ ಹೋಗಿ ಉಳಿದು ಬರಬಾರದು, ಅಳಿದು

ಬರಬೇಕು ಎಂದು ಹೇಳಿ–"ಉಳವಿ ಜಾತ್ರೆಗೆ ಹೋಗೋಣು ಬನ್ನಿರಮ್ಮಾ ತಿಳಿದು ಬ್ರಹ್ಮನ ಬಯಲೊಳಗಾಡೋಣಮ್ಮ" ಎಂದು ಹಾಡುತ್ತ ಚೆನ್ನಬಸವಣ್ಣನವರು ಕೈಗೊಂಡ ಯೋಗ ಸಾನಿಧ್ಯ ಮತ್ತು ಐಕ್ಯಸ್ಥಳಗಳನ್ನು ಬಣ್ಣಿಸಿದ್ದಾರೆ. ಹಾಗೆಯೇ ತಮ್ಮ ಸಂಚಾರ ಕಾಲದಲ್ಲಿನ ಸಮಕಾಲೀನ ಸಾಧು–ಸಂತರಾದ ಶ್ರೀ ಚಿದಂಬರ ದೀಕ್ಷಿತರು, ಶ್ರೀಬಾಲಲೀಲಾ ಮಹಾಂತ ಶಿವಯೋಗಿಗಳು, ಗುಡಗೇರಿಯ ಕಲ್ಮಠದ ಸಂಗಮೇಶ್ವರರು, ಅಂಕಲಗಿಯ ಶ್ರೀ ಶಿವಾನಂದರು, ಗದಗದ ಶ್ರೀ ಮಡಿವಾಳಪ್ಪ, ನವಲಗುಂದದ ಶ್ರೀ ನಾಗಲಿಂಗಪ್ಪ, ಹುಬ್ಬಳ್ಳಿ ಶ್ರೀ ಸಿದ್ಧಾರೂಢ..ಮೊದಲಾದ ಸಾಧು ಸಂತರ ಪ್ರಭಾವ ಪ್ರೇರಣಗಳನ್ನು ಶರೀಫರು ತಮ್ಮ ತತ್ವಪದಗಳಲ್ಲಿ ಸ್ಮರಿಸಿಕೊಂಡಿದ್ದಾರೆ.

ಕುಲಭೇದಗಳನ್ನು ಕೃತಕವೆಂದು ತಿಳಿದಿದ್ದ ಜಾತ್ಯಾತೀತ ಮನೋಭಾವದ ಶರೀಫರು ಸೂಫಿ, ವೈದಿಕ, ವೀರಶೈವ ಮೂರು ಧರ್ಮಗಳ ಸಾರವನ್ನು ಚೆನ್ನಾಗಿ ಅರಿತಿದ್ದ ಶರೀಫರಿಗೆ ಮುಸ್ಲಿಂ ಸಂಸ್ಕೃತಿಯಲ್ಲಿದ್ದ 'ಜೀವಹಿಂಸೆ', ವೈದಿಕ ಧರ್ಮದಲ್ಲಿದ್ದ ಕೆಲವು ಅಮಾನವೀಯ ಡಂಬಾಚಾರಗಳು ಇಷ್ಟವಾಗದೆ ವೀರಶೈವ ಧರ್ಮದ 'ವಿಭೂತಿ ವೀಳ್ಯೆ' ಪದ್ಧತಿ ಮೂಲಕ ದೇಹ ತ್ಯಾಗಕ್ಕೆ ನಿರ್ಧರಿಸಿದರು. ಈ 'ವಿಭೂತಿ ವೀಳ್ಯೆ'ಕ್ಕೆ ಶರೀರ ತ್ಯಾಗ ಮಾಡುವವರು ಜಂಗಮರ ಪಾದಪೂಜೆ ಮಾಡಿದ ನಂತರ ಆ ಜಂಗಮರು ತಮ್ಮ ಪಾದವನ್ನು ದೇಹ ತ್ಯಾಗಿಯ ತಲೆಯ ಮೇಲೆ ಇಟ್ಟು ಶಿವಸಾಯುಜ್ಯಯುತವಾದ ಮಂತ್ರಪಠಣ ಮಾಡುವುದು ಅವಶ್ಯವಿದ್ದವು. ಆದರೆ ಸಕಲ ಧರ್ಮಗಳ ಸಾರಸತ್ವರಾಗಿ ಮಹಾಮಹಿಮರಾಧ ಶರೀಫರ ಮಸ್ತಕದ ಪಾದವಿಡಲು ಯಾವ ಜಂಗಮನೂ ಮನಸ್ಸು ಮಾಡದಾಗ "ಹಿರೇಮಠದ ಕರಿಬಸವಯ್ಯನವರು ಶರೀಫರ ಅಂತಿಮ ಇಚ್ಛೆಯನ್ನು ನೇರವೇರಿಸಿ ಓಂಕಾರಪ್ರಭೆಯಲ್ಲಿ ಅನಿಮಿಷದೃಷ್ಟಿಯಲ್ಲಿ ಶರೀಫರು ಶಿವೈಕ್ಯರಾಗುವುದಕ್ಕೆ ಅನುವು ಮಾಡಿಕೊಟ್ಟರು.

ಹಿಂದು–ಮುಸ್ಲಿಂ ಒಡಂಬಡಿಕೆಯಂತೆ ಶರೀಫರ ಗದ್ದುಗೆಯ ಎಡ ಭಾಗದಲ್ಲಿ ನಮಾಜು ಮಾಡಿ ಸಕ್ಕರೆ ಹಂಚಿ ಕುರಾನಿನ ಪಠಣ ಮಾಡಿ ಶರೀಫ ನಾನಾಕಿ ದೋಸ್ತಾರಾ, ಅಲ್ಲಾಹೋ ಅಕ್ಬರ್ ಎಂದು ಮುಸ್ಲಿಂರು ನಡೆದುಕೊಂಡರೆ; ಶರೀಫರ ಗದ್ದುಗೆಯ ಬಲ ಭಾಗದಲ್ಲಿ ಶರೀಫ ಶಿವಯೋಗಿ ಮಹಾರಾಜ ಕಿ ಜೈ, ಹರಹರ ಮಹದೇವ ಎನ್ನುತ ತಮಗೆ ತೋಚಿದಂತೆ ಹಿಂದುಗಳು ಪೂಜಿಸುತ್ತಾರೆ. ಶರೀಫರ ಗದ್ದುಗೆ ಎಂಬುದು ಜಾತ್ಯಾತೀತ ಸಂಕೇತವಾಗಿದ್ದು ಅಲ್ಲಿ ಮತೀಯ ಭಾವನೆಗೆ ಆಸ್ಪದವಿಲ್ಲ. ನೆರಳ ತಂಪಿನ ವಿಶಾಲ ಕಟ್ಟೆ; ಶರೀಫಜ್ಜನ ಮಮತೆಯ ತಾಣವಾಗಿದ್ದು ಇಲ್ಲಿ ಬರುವ ಸರ್ವರೂ ಮಕ್ಕಳೆಂಬ ಐಕ್ಯತಾಭಾವವನ್ನು ಸಾಬೀತುಪಡಿಸುತ್ತಿದೆ.

ಹರಿ ಸಂಸ್ಕೃತಿ

ಶ್ರೇಷ್ಠ ತತ್ವಜ್ಞಾನಿಗಳು, ದಾರ್ಶಿನಿಕರು ಆಗಿದ್ದ ಸ್ಮಾರ್ತ ಬ್ರಾಹ್ಮಣರಾದ ಗುರು ಗೋವಿಂಧಭಟ್ಟರು ಧಾರವಾಡ ಜಿಲ್ಲೆಯ ಕುಂದಗೋಳ ತಾಲೋಕಿನ 'ಕಳಸ' ಗ್ರಾಮದಲ್ಲಿದ್ದರು. ಸ್ಥಿತಪ್ರಜ್ಞರು ಅದ್ವೈತಿಗಳು, ಸದಾ ಸಂಚಾರ ಪ್ರಿಯರು ಆಧ್ಯಾತ್ಮ ಜೀವಿಗಳಾಗಿದ್ದ ಗೋವಿಂಧಭಟ್ಟರು ಶರೀಫರ ತಂದೆ ಇಮಾಮ್ ಸಾಬರ ಬಾಲ್ಯದ ಗೆಳೆಯರು ಸಹ ಆಗಿದ್ದರೆಂದು ಅನೇಕ ಉಲ್ಲೇಖಗಳಿಂದ ತಿಳಿದುಬರುತ್ತದೆ. ತಂದೆಯ ಮನವಿಯ ಮೇರೆಗೆ ಮತ್ತು ಶರೀಫರ ಕೊಟ್ಟ ವೇದಾಂತಬದ್ಧವಾದ 'ನಿಮ್ಮಪ್ಪನೆ ನಮ್ಮಪ್ಪ' ಎಂಬ ಉತ್ತರಕ್ಕೆ ಮಾರುಹೋಗಿ ಶರೀಫನನ್ನು ನಿಜಶಿಷ್ಯನಾಗಿ ಗುರು ಗೋವಿಂಧಭಟ್ಟರು ಸ್ವೀಕರಿಸಿ ಮಾದರಿ, ಆದರ್ಶ ಗುರುಶಿಷ್ಯರಂತೆ ಅನ್ಯೂನ್ಯವಾಗಿದ್ದದ್ದು ವೈದಿಕ ಮತ್ತು ಮುಸ್ಲಿಂ ಎರಡು ಮತ ಪಂಥಗಳಿಗೆ ಹಿಡಿಸದೆ ಬಹಿಷ್ಕಾರಗಳಂತ ಅನೇಕ ಬೆದರಿಕೆಗಳನ್ನು ಗುರು–ಶಿಷ್ಯರಿಬ್ಬರ ಮತ ಪಂಥಗಳವರು ಹಾಕಿದಾಗ ಯಾವುದಕ್ಕೂ ಜಗ್ಗದ ಬಗ್ಗದ ಗುರು ಗೋವಿಂಧಭಟ್ಟರು ತಮ್ಮ ಶಿಷ್ಯ ಶರೀಫರಿಗೆ "ಬ್ರಹ್ಮ ಒಂದೇ ಬ್ರಹ್ಮನಾದ ಒಂದೇ, ಬ್ರಹ್ಮಾನಂದದಿ ಮುಣಗ್ಯಡ್ವುದು ನೋಡು", ಬಾಯಿಲೆ ಬ್ರಹ್ಮವ, ಅಹಂ ಬ್ರಹ್ಮಾಸ್ಮಿ ಎಂಬ ಉಪನಿಷತ್ ಸಾರಸರ್ವಸ್ವವನ್ನು ತಿಳಿಸಿ ಬ್ರಹ್ಮಧ್ಯಾನದಲ್ಲಿ, ಆತ್ಮಧ್ಯಾನ್ಯದಲ್ಲಿ ಲೀನಗೊಳಿಸಿ ಜನಿವಾರವನ್ನು ಸಹ ತೊಡಿಸಿ ಪುನೀತರನ್ನಾಗಿ ಮಾಡಿದ್ದನ್ನು ಸತಃ ಶರೀಫರೆ "ಹಾಕಿದ ಜನಿವಾರವ ಸದ್ಗುರು ನಾಥ..." ಎಂದು ಮನಪೂರ್ವಕವಾಗಿ ಸ್ತುತಿಸಿ ಪ್ರಾರ್ಥಿಸಿರುವುದು ಸುಪ್ರಸಿದ್ಧ ತತ್ವಪದವಾಗಿರುವುದು ಗಮನಿಸಬಹುದು. ಶರೀಫರು ಅನುಭಾವಗಳನ್ನು ನೂರಾರು ತತ್ವಪದಗಳನ್ನು ರಚಿಸಿದ್ದಾರೆ.

ಶರೀಫರು ಗುರು ಗೋವಿಂದಭಟ್ಟರು ಶಾಕ್ತೇಯ ಪಂಥದವರಾದ ಕಾರಣ ಪೇರಣೆಗೊಂಡು 'ದೇವಿ ದಂಡಕ'ವನ್ನು, ರಾಮಾಯಣ ಮಹಾಭಾರತಗಳ ದೃಷ್ಟಾಂತಗಳನ್ನು ಒಳಗೊಂಡ' ಶ್ರೀಕೃಷ್ಣ ದಂಡಕ'ವನ್ನು ರಚಿಸಿಸುದನ್ನು ತಿಳಿಯಬಹುದು. ಅಲ್ಲದೆ ಪೂರ್ವಜನ್ಮದಲ್ಲಿನ ದುಷ್ಕೃತ್ಯಗಳು ಗುರುವಿನ ಕೃಪಾಕಟಾಕ್ಷದಿಂದ ಜ್ಞಾನೋದಯವಾದಾಗ ಅದಕ್ಕಾಗಿ ಪಶ್ಚಾತ್ತಾಪ ವ್ಯಕ್ತಪಡಿಸಿರುವ 'ಶಿವಾಪರಾಧ ಸ್ತೋತ್ರ' ದಂಡಕವು ಲಿಯೋಟಾಲ್ ಸ್ಟಾಯ್‌ನ 'ತಪ್ಪೊಪ್ಪಿಗೆ' ಎಂಬುದಕ್ಕೆ ಸಾದೃಶ್ಯವಾಗಿದೆ.

ಶರೀಫರ ಉತ್ತರ ಕರ್ನಾಟಕದ ಸಾಂಸ್ಕೃತಿಕ ವೈಶಿಷ್ಟ್ಯತೆ

ಉತ್ತರ ಕರ್ನಾಟಕದ ಬಹುತೇಕ ಊರುಗಳಲ್ಲಿ ವಿವಿಧ ಜಾತಿ, ಧರ್ಮದವರು ಸೇರಿ ಹಾಡು, ನೃತ್ಯ, ಹೆಜ್ಜೆ ಕುಣಿತ, ಕೋಡಂಗಿ ಕುಣಿತ, ಡಬಗಳ್ಳಿ ಕುಣಿತ, ಹುಲಿವೇಷ ಕುಣಿತ, ಅಚ್ಚೊಳ್ಳಿ ಸೋಗು, ಭಡಂಗ್ ವೇಷ ಹಾಕುವ ಹರಕೆ ಕಲಾವಿದರು, ವೇಷಗಾರಿಕೆ, ಸಿಹಿ ತಿನಿಸು, ಮೆರವಣಿಗೆ.. ಹೀಗೆ ಹಲವು ಬಹುರೂಪಗಳನ್ನು ಮೊಹರಂ ಆಚರಿಸುತ್ತಾರೆ. ವಿಶೇಷವೆಂದರೆ ಮುಸ್ಲಿಮರೇ ಇಲ್ಲದ ಕೆಲವು ಊರುಗಳಲ್ಲೂ ಅನ್ಯ ಮತಧರ್ಮದವರು ಮೊಹರಂ ಆಚರಿಸುವುದು ಸಂಸ್ಕೃತಿಗಳು ಸಂಗಮವಾಗಿರುವುದಕ್ಕೆ ನಿದರ್ಶನವಾಗಿದೆ.

ಮೊಹರಂ ಹಾಡುಗಾರರು ಇಸ್ಲಾಮಿನ ಚರಿತ್ರೆ ಪುರಾಣಗಳಂತೆ ಮಹಾಭಾರತ, ರಾಮಾಯಣ, ಶಿವಪುರಾಣಗಳಲ್ಲಿಯೂ ಪರಿಣಿತಿ ಪಡೆದಿದ್ದಾರೆ.ಅವರ ಹಾಡುಗಳಲ್ಲಿ ಯಜೀದ್–ಹಸನ್ ಹುಸೇನರ ಲಾಡಾಯಿ ಚರಿತ್ರೆಯು ದೇಸಿ ಪುರಾಣಗಳ ಜತೆ ಬೆರೆತುಬಿಡುತ್ತದೆ.ಬಾಗೇವಾಡಿ ತಾಲೋಕಿನಲ್ಲಿ ಪೈಗಂಬರನ್ನು ರಾಮನನ್ನಾಗಿ, ಬೀಬೀ ಫಾತಿಮಾರನ್ನು ಸೀತೆಯನ್ನಾಗಿ, ಹಸನ–ಹುಸೇನರನ್ನು ಲವ–ಕುಶರನ್ನಾಗಿ ಸಮೀಕರಿಸಿ ಹಾಡುತ್ತಾರೆ.ಈ ಹಾಡುಗಳಲ್ಲಿ ಪೈಗಂಬರರನ್ನು ಶರಣ ಎಂದೇ ಕರೆಯಲಾಗಿದೆ. ಬಸವಣ್ಣ, ಮಹದೇವ ಹಾಗೂ ಪೈಗಂಬರ್ ಒಟ್ಟಿಗೇ ಇರುವ ಮಂತ್ರವನ್ನು ಅನೇಕ ಮೊಹರಂ ಮಸೀದಿಯ ತಲೆ ಬಾಗಿಲಲ್ಲಿ ಕೆತ್ತಲಾಗಿದೆ.ಇಲ್ಲಿರುವ ತತ್ವವೆಂದರೆ, ಲೋಕಹಿತ ಬಯಸುವ ಲೋಕದ ಸಮಸ್ತ ದಾರ್ಶನಿಕರು ದೈವಗಳು ಮೂಲತಃ ಒಂದೇ ಎಂಬುದು.ಭಾರತದ ಅದರಲ್ಲೂ ಕರ್ನಾಟಕದ ಸಂಸ್ಕೃತಿಯ ವೈಶಿಷ್ಯವೆಂದರೆ ಬಹುತ್ವ ಪ್ರಜ್ಞೆ, ಈ ಪ್ರಜ್ಞೆಯು ಹಲವು ಮತ ಧರ್ಮಗಳ ಪುರಾಣ ಮತ್ತು ಇತಿಹಾಸವನ್ನು ಸೇರಿಸಿಕೊಂಡಿದೆ. ವಿಭಿನ್ನ ಮತಧರ್ಮದ ಕಥನಗಳಲ್ಲಿರುವ ಸಮಾನ ಅಂಶಗಳನ್ನು ಒಂದೆಡೆ ಜೋಡಿಸಿದೆ. ಶರೀಫರ ತತ್ವಪದಗಳನ್ನು ಅರಿಯಬೇಕಾದರೆ ಮೊಹರಮ್, ಕರ್ಬುಲಾ, ರಿಯಾಯತ್, ಅಲ್ಲಾವಿ ಅಥವಾ ಐಸುರ ಎಂಬಂಥ ಮುಸ್ಲಿಂ ಸಂಪ್ರದಾಯ ಪದ್ಧತಿಗಳು ಹೆಚ್ಚಾಗಿ ಬಳಕೆಯಾಗಿರುವುದರಿಂದ ಇವುಗಳ ಕುರಿತಾಗಿ ಸವಿವರ ಮಾಹಿತಿಯಲ್ಲಿ ಸಂದರ್ಭಾನುಸಾರವಾಗಿ ಅಳವಡಿಸಿಕೊಂಡಿದ್ದೇನೆ.

ತತ್ವಪದ:–ಮನುಷ್ಯ ಜೀವಿ ತಾನು ನಂಬಿದ ಜೀವ ಮತ್ತು ಜೀವನಕ್ರಮದ ಕುರಿತು ಆಲೋಚಿಸುವ ಹಾಗೂ ತಪ್ಪು–ಒಪ್ಪುಗಳನ್ನು ಯಾವುದಾದರೊಂದು ಸನ್ನಿವೇಶ ಅಥವಾ ಸಂದರ್ಭಗಳಿಗೆ

ಪೂರಕವಾಗಿ ಹಾಡಿನ ಮೂಲಕ ವಿವರಿಸುವುದು. ತತ್ವಪದಗಳು ವಾಚ್ಯಾರ್ಥಕ್ಕಿಂತ ಲಕ್ಷ್ಯಾರ್ಥ ಪ್ರಧಾನವಾಗಿರುವುದರಿಂದ ಬದುಕಿನೊಂದಿಗೆ ಹಾಡಿನಲ್ಲಿರು ತತ್ವದ ಸಾರವನ್ನು ಹೋಲಿಸಿಕೊಂಡರೆ ಸುಲಭವಾಗಿ ಮನವರಿಕೆಯಾಗುತ್ತದೆ.

ಅನುಭಾವ:–ತಿಳಿಯಲಾರದ ಘನವನ್ನು ತಿಳಿಯುವ, ಕಾಣಬಾರದ ಪರವಸ್ತುವನ್ನು ಕಾಣುವ ಅಂತರಂಗದ ಅಮೂಲ್ಯ ಆತ್ಮವಿದ್ಯೆಯೇ ಅನುಭಾವ. ಶರಣರ ವಚನಗಳ ಮೂಲಕ ಅನುಭಾವದ ಮಹತ್ವವನ್ನು ಅರಿಯಬಹುದು. ಶಿವ, ಓಂ ನಮಃ ಶಿವಾಯ, ಷಡಕ್ಷರಿಮಂತ್ರ, ಪಂಚಾಕ್ಷರಿ ಮಂತ್ರ, ಶರಣ, ಲಿಂಗ ಮೊದಲಾದ ವೀರಶೈವ ಪಾರಿಭಾಷಿಕ ಶಬ್ದಗಳು ಶರೀಫರ ಹಾಡುಗಳಲ್ಲಿ ಮತ್ತೆ ಮತ್ತೆ ಗೋಚರಿಸುತ್ತವೆ.

ರಿವಾಯತ್:–ರಿವಾಯತ್ ಎಂಬುದು ಬೌದ್ಧಿಕ ಪ್ರಧಾನ ಕಲೆಯಾಗಿದ್ದು ಸಾಹಿತ್ಯ ದೃಷ್ಟಿಯಿಂದ ಅತ್ಯಂತ ಸ್ವಾರಸ್ಯಕರವಾಗಿದೆ. ಒಂದು ಗುಂಪಿನವರ ಇತಿಹಾಸ, ಪುರಾಣ ಮೊದಲಾದ ಪ್ರಶ್ನೆಗಳಿಗೆ; ಮತ್ತೊಂದು ಗುಂಪಿನವರು ತಕ್ಷಣವೇ ಸೂಕ್ತ ಉತ್ತರ ಮೂಲಕ ಜವಾಬ್ ನೀಡುತ್ತಾರೆ. ಈ ಸವಾಲ್–ಜವಾಬ್‌ನಿಂದ ಕಥಾವಸ್ತುವಿನ ಪೂರ್ಣಚಿತ್ರ ದೊರೆಯುತ್ತದೆ. ಉದಾಹರಣೆಗೆ ಪೈಗಂಬರರು ಹುಟ್ಟು, ಸಾಧಾನೆ ಕುರಿತು, ರಾಮಾಯಣ ಮತ್ತು ಮಹಾಭಾರತಗಳು ನಡೆದ ಕ್ರಮಗಳ ಬಗ್ಗೆ ಪ್ರಶ್ನೋತ್ತರಗಳ ಸಹಕಾರದೊಂದಿಗೆ ಅರ್ಥಪೂರ್ಣವಾಗಿ ಹಾಡಿ ಹೇಳುತ್ತಾರೆ.

ಶರೀಫರು ಹಿಂದು–ಮುಸ್ಲಿಮ್ ಸಂಸ್ಕೃತಿ ಸಂಗಮಪದಗಳು

**ಅಂಬಾರ್ದಲಾವಿಗೆ ಶಾಂಭವಿ**

ದಸರ–ಮೊಹರಮ್ ಸಂಸ್ಕೃತಿಗಳನ್ನು ಸಮೀಕರಣಗೊಂಡ ಪದ. ಮಹಾಮಾತೆ ಶಾಂಭವಿ ದಸರೆ ಐಸುರ ಹಬ್ಬಗಳಲ್ಲಿ ಪರಾಕ್ರಮ ಮೆರೆದು ಸೂಫಿ ಸಂತತಿಯ ಅಸರುನಾದ ಧಾಮಶಪುರದ ಯಜೀದಾದಿಗಳನ್ನು ಅನುಕ್ರಮವಾಗಿಕೊಂದು; ಮೆಟ್ಟಿ ಕೈಲಾಸ ಪರ್ವತದಲ್ಲಿ ನೆಲೆಗೊಂಡು ಅನಂತರ ಅಲ್ಲಿನೆಲೆಗೊಳ್ಳದೆ ಶಿಶುನಾಳಧೀಶ ಬೇಕೆಂದು ಆಶಿಸಿದ ಜಗನ್ಮಾತೆ ಮೊಹರಮ್ ಹಬ್ಬದಲ್ಲಿ ಪ್ರೀತಿಯಿಂದ ಭೂಲೋಕಕ್ಕೆ ಆಗಮಿಸಿದಂತ ಲೋಕ ಮಾತೆ ಶಾಂಭವಿ. ಇಲ್ಲಿ ದಸರಾ ಹಬ್ಬವನ್ನು 'ನವರಾತ್ರಿ'ಯಾಗಿ ಆಚರಿಸುವುದು ಬೇರೆಯಲ ಐಸುರ ಅಥವಾ ಅಶುರಾಹಬ್ಬವನ್ನು ಮೊಹರಮ್ ಆಗಿ ಆಚರಿಸುವುದು ಬೇರೆಯಲ್ಲ ಅಂಬಾಭಾವಾನಿ ಮಹೀಷಾಸುರನನ್ನು ಸಂಹರಿಸಿದಂತೆ ಮುಸ್ಲಿಂ ಧರ್ಮವಿರೋಧಿಯಾದ ಯಜೀಜನನ್ನು ಸಂಹರಿಸಿದಳು. ಇಲ್ಲಿ ಧರ್ಮಗಳು ಮುಖ್ಯವಲ್ಲ ಲೋಕಕಂಟಕರನ್ನು ಸಂಹಸಿ ಲೋಕಕ್ಕೆ ಒಳಿತನ್ನುಂಟು ಮಾಡುವ ಮಹಾಮಾತೆಯಾಗಿ ಸದಾ ಪೊರೆಯುತ್ತಾಳೆ ಎಂಬ ತತ್ವವನ್ನು ನೀಡಿದ್ದಾರೆ.

**ಐಸುರ ಮೋರುಮ ದಸರೆಕ**

ಈ ಪದ್ಯದಲ್ಲಿ ಕರ್ಬಲ ಯುದ್ದವನ್ನು ಮಹಾಭಾರತದ ಕುರುಕ್ಷೇತ್ರ ಯುದ್ದಕ್ಕೆ ಸಾದೃಶ್ಯವಾಗಿ ಹೇಳಿರುವುದನ್ನು ಕಾಣಬಹುದು. ದಸರಾ ಹಬ್ಬದಲ್ಲಿ ಪಾಂಡವರು ಬನ್ನಿ ಮರದಲ್ಲಿ ತಮ್ಮ ಶಸ್ತ್ರಾಸ್ತ್ರಗಳನಿಟ್ಟು ನಿಶ್ಯಬ್ಧ ಪ್ರತೀಕವಾಗಿ ಆಚರಿಸುವ ವಿಧಾನಗಳನ್ನು ಹದಿನೆಂಟು ಜಾತಿಯ ಪದಕ್ಕೆ ನಜರಸಯ್ಯ ನಿಜ ಜ್ಞಾನದಿ ನೋಡಿಕೋ ಕದನ ಕಾಪಾಡುವುದು ಎಂಬ ವಿಧಿ–ವಿಧಾನಗಳೊಂದಿಗೆ ಸೂಚಿಸಿದ್ದಾರೆ. ಮಹಾಭಾರತ ಹಾಗೂ ಪುರಾಣಕ್ಕೆ ವೀರ ಪೈಗಂಬರರ ಕಥೆಗಳನ್ನು ಸಮೀಕರಿಸುವುದನ್ನು ಕಾಣಬಹುದು.

'ಮಾರಿಕಾಕರ್ಬಲಾ' ಕೃತಿಯಲ್ಲಿ ಕೆಲವು ಹಿಂದುಗಳು ಸಹ ಇಮಾಮ್ ಹಸನ್, ಹುಸೇನರ ಪರವಾಗಿ ಯುದ್ಧದಲ್ಲಿ ಪಾಲ್ಗೊಳ್ಳಲು ಕರ್ಬಲಾಕ್ಕೆ ಹೋಗಿದ್ದರೆಂಬ ಮಾಹಿತಿ ಇದೆ. ಅಕಬರ್‌ಬಾದ ಶಹಾನು ಹಿಂದು ಮುಸ್ಲಿಮರಲ್ಲಿ 'ಸಖ್ಯ' ಬೆಳೆಸಲು ಧೀನ್–ಎ–ಇಲಾಹಿ ಜಾರಿಗೆತಂದನು. ಮೊಹರಮ್ ಹಬ್ಬ ಬಹುಶಃ ೮ನೇ ಶತಮಾನದಿಂಚೇಗ 'ರಾಷ್ಟ್ರೀಯ ಹಬ್ಬವಾಗಿ ಆಚರಣೆಗೆ ಬಂದಿರಬಹುದು. ಅಲ್ಲದೆ ಕರ್ನಾಟಕದಲ್ಲಿ ವಿಜಾಪುರವನ್ನಾಳಿದ ಮುಸ್ಲಿಮ್ ಅರಸರಿಂದ ಮೊಹರಮ್ ಹಬ್ಬದಾರಣೆ ಪ್ರಾರಂಭವಾಯಿತೆಂದು ಭಾವಿಸಲಾಗುತ್ತಿದೆ. ಒಟ್ಟಿನಲ್ಲಿ ಸತ್ಯಕ್ಕಾಗಿ, ಧರ್ಮಕ್ಕಾಗಿ, ಎಲ್ಲಕ್ಕೂ ಮಿಗಿಲಾಗಿ ಮಾನವೀಯ ಮೌಲ್ಯಸ್ಥಾಪಿಸುವ ದಿಸೆಯ ಈ ಮೊಹರಮ್ ಹಬ್ಬ ಪರಂಪರೆಯಿಂದ ಮುಸ್ಲಿಮ್‌ರದಾದರೂ ಆಚರಣೆಯಿಂದ ಅದೊಂದು ಸಾಮೂಹಿಕ ಹಬ್ಬವಾಗಿ ಬೆಳೆದು ಬಂದು ಭಾರತೀಯರ ಭಾವೈಕ್ಯ ಪರಂಪರೆಗೊಂದು ಸಾಕ್ಷಿಯಾಗಿ ನಿಂತಿದೆ."೨

ಮೊಹರಮ್:–ಮುಸ್ಲಿಂರ ಹನ್ನೆರಡು ತಿಂಗಳುಗಳಲ್ಲಿ ಮೊದಲಿನ ತಿಂಗಳು ಮೊಹರಮ್. 'ಹಜರತ್‌ಮಹಮ್ಮದ್ ಪೈಗಂಬರರು 'ಮೆಕ್ಕಾದ ಮೂರ್ತಿಪೂಜಕರಾದ 'ಕುಫಾ'ರಜನರನ್ನು ಸೋಲಿಸಿ ಪ್ರಜಾಪ್ರಭುತ್ವಕ್ಕೆ ಪೂರಕವಾದ ಇಸ್ಲಾಂಧರ್ಮ ಪ್ರತಿಷ್ಠಾಪನೆ ಮಾಡಿದರು.ಇವರು ಶಾಂತಿಪ್ರಿಯತೆಯ ಪ್ರತೀಕವಾದ 'ಖಿಲಾಫತ್' ಎಂಬ ನಿತ್ಯನೂತನವಾದ ಕಲ್ಪನೆಯನ್ನು ಜಗತ್ತಿಗೆ ಸಾರಿದರು. ಪೈಗಂಬರರ ತರುವಾಯ ಹಜರತ್‌ಉಸ್ಮಾನ್, ಹಜರತ್‌ಅಬೂಬಕರ್ ಸಿದ್ದಿಕೀ, ಹಜರತ್‌ಉಮರ್ ಫಾರೂಕ್ ಮತ್ತು ಪೈಗಂಬರರ ಅಳಿಯಂದಿರಾದ ಹಜರತ್ ಅಲಿ 'ಖಿಲಾಫತ್'ದ ಮಹತ್ವ ಹೆಚ್ಚಿಸಿದರು ಆದರೆ ಸಿರಿಯಾ ಪ್ರಾಂತಾಧಿಕಾರಿಯಾಗಿದ್ದ ಅಮೀರ ಮುವಾಯಿಯು ಸ್ಥಾನ ಅತಿಕ್ರಮಿಸಿದ್ದಲ್ಲದೆ, ಮಗ ಯಜೀದನೆ ಹುಕ್ಕುದಾರನೆಂದು ಸಾರುತ್ತ ದರ್ಪಾಡಳಿತ ನಡೆಸಿದಾಗ ಪೈಗಂಬರರ ಮೊಮ್ಮಕ್ಕಳಾದ ಹಜರತ್ ಹಸನ್ ಮತ್ತು ಹುಸೇನರು ಈ ದಬ್ಬಾಳಿಕೆಯನ್ನು ಉಗ್ರವಾಗಿ ಖಂಡಿಸಿದ್ದು ಕರ್ಬಲಾಯುದ್ಧಕ್ಕೆ ನಾಂದಿಯಾಯಿತು. ಕರ್ಬಲಾ ಕಾಳಗದಲ್ಲಿ ಹಸನ್ ಹಾಗೂ ಹುಸೇನ್‌ರನ್ನು ಹಿಜರಿ ಶಕ ೬೧ರ ಮೊಹರಮ್ ಮಾಸದ ೧೧ನೇ ದಿನ ಮೋಸದಿಂದ ಕೊಂದಿದ್ದರಿಂದ ಮೊಹರಮ್ ಮಾಸ ವಿಶೇಷತೆಯನ್ನು ಪಡೆದಿರುವುದನ್ನು ಜ್ಞಾಪಿಸಿಕೊಳ್ಳಬಹುದು.

**ಜಾರತ ಕರ್ಮವು ತೀರಿದ**

ದೇವರ ಅನುಯಾಯಿಗಳಾದ ಇಮಾಮ ಹಸನ್ ಹುಸೇನ ಮೊದಲಾದವರ ಮಹತ್ವವನ್ನು ಸಾರಿ ತಿಳಿಸಲು ತಾಜೀಯಾ ಎಂಬ ದೇವರ ಮುಂದೆ 'ಅಗ್ನಿಕುಂಡ'ವನ್ನು ರಚಿಸಿಕೊಂಡು ಆ ಅಗ್ನಿಕುಂಡದ ಒಳಗೆ ಅಥವಾ ಮುಂದೆ ಶಾಸ್ತ್ರೋಕ್ತವಾಗಿ ಕುಣಿಯುವ 'ಅಲಾವಿ ಕುಣಿತ'ವನ್ನು ಮೊಹರಮ್ ಸಂದರ್ಭದಲ್ಲಿ ಆಚರಿಸುವ ವಿಚಾರವನ್ನು ಒಳಗೊಂಡಿದೆ. 'ಅಲಾವ್' ಎಂಬುದರಿಂದ 'ಅಲಾಬಿ', ಅಲಾವಿಹುಟ್ಟಿಕೊಂಡು ಕ್ರಮೇಣ ಅಲ್ಪೆಬ್ಬವಾಗಿದ್ದನ್ನು ಮತ್ತು ತ್ರಿಪುರ ದಹನದ ಕಥೆಯೊಂದಿಗೆ ಸೂಫಿಸಂಸ್ಕೃತಿಯ ಸಂಬಂಧವನ್ನು ಸೇರಿಸಿ ಶರೀಫರು ಹೇಳಿರುವುದನ್ನು ಅರಿಯಬಹುದು.

ಐಸುರ ಮೋರುಮ ಎರಡರ ಮಧ್ಯದಿ

ಐಸುರ ಮೋರುಮ ಎರಡರ ಮಧ್ಯದಿ ಈ ಪದದಲ್ಲಿ ಸೂರ್ಯನ ಮಗನಾದ ಹನುಮನು ರಾವಣನೆಂಬ ಅಸುರಕುಲ ಸಂಹಾರಕ್ಕೆ ಕಾರಣವಾಗಿದ್ದ ರಾಮಾಯಣದ ಸಾರವನೆನಲ್ಲಾ ತಮ್ಮ ಸಂಸ್ಕೃತಿಯಲ್ಲಿನ ಮದೀನಾ, ಹಜರತ್‌ಗಳಿಗನುಗುಣವಾಗಿ ತಿಳಿಸುವುದನ್ನು ಗಮನಿಸಬಹುದು.

ಐಸುರ/ಅಶುರಾ :–ಅರೇಬಿಕ್‌ನಿಂದ 'ಅಶುರಾ', ಐಸುರಉತ್ಪತ್ತಿಗೊಂಡಿದೆ.ಮೊಹರಮ್ ತಿಂಗಳ ಮೊದಲ ಹತ್ತುದಿನಗಳನ್ನು 'ಅಶುರಾ' ಎನ್ನುತ್ತಾರೆ. ಈ ಅವಧಿಯಲ್ಲಿ ಇಮಾಮ್ ಹಸನ್ ಹುಸೇನ್ ಮತ್ತು ಅವರ ಅನುಯಾಯಿಗಳು ಕರ್ಬಲಾ ಯುದ್ಧದಲ್ಲಿ ಯಜೀದನೊಡನೆ ಹೋರಾಡಿ ಹುತಾತ್ಮರಾದ

ಮಾಹಿತಿಯನ್ನು ಸ್ಮರಿಸಬಹುದು.

ಈ ಹಾಡಿನಲ್ಲಿ ಸೂರ್ಯನ ಮಗನಾದ ಹನುಮನು ರಾವಣನೆಂಬ ಅಸುರಕುಲ ಸಂಹಾರಕ್ಕೆ ಕಾರಣವಾಗಿದ್ದ ರಾಮಯಾಣದ ಸಾರವನ್ನೆಲ್ಲಾ ತಮ್ಮ ಸೂಫಿ ಸಂಸ್ಕೃತಿಯಲ್ಲಿನ ಮದೀನಾ, ಹಜರತಗಳಿಗನುಗುಣವಾಗಿ ತಿಳಿಸಿರುವುದನ್ನು ಗಮನಿಸಬಹುದು.

**ಹನುಮಂತ ಹಾರಿದಾ ಲಂಕಾ**

ಈ ಪದ್ಯದ ಶೀರ್ಷಿಕೆಯಲ್ಲಿ ಸ್ಪಷ್ಟವಾಗಿ ತಿಳಿಯುವಂತೆ ಹನುಮಂತ ಲಂಕೆಗೆ ಹಾರಿ ಸೀತೆಗೆ ರಾಮನ ಉಂಗುರುದುಡುಗೊರೆ ನೀಡಿ ಮತ್ತೆ ರಾಮನನ್ನು ಕೂಡಿಕೊಂಡ ರಾಮನ ಬಂಟ ಹನುಮಂತ ಹಾಗೆಯೇ ತಾನು ತನ್ನ ಗುರುನಾಥನಾದ ಗೋವಿಂದರ ಪಾದ ಸೇರುವ ತವಕವನ್ನು ವ್ಯಕ್ತಪಡಿಸಿದ್ದಾರೆ.

ಶರೀಫರು ಎಲ್ಲ ಧರ್ಮಗಳ ಆಧಿದೇವತೆಗಳನ್ನು ಸ್ತುತಿಸಿ ದಂಡಕ ರಚಿಸಿದ್ದರು. ಅತ್ತಿಗೇರಿಯ ಹನುಮಂತ ದೇವರ ದರ್ಶನಕ್ಕೆ ಹೋದಾಗ ಶರೀಫರನ್ನು ಮುಸ್ಲಿಂರು ಅಂತ ಪ್ರವೇಶಕ್ಕೆ ಅಡ್ಡಿಪಡಿಸಿದಾಗ ದೇವಸ್ಥಾನದ ಹೊರಭಾಗದಲ್ಲಿಯೇ ಭಕ್ತಿಯಿಂದ ಹನುಮಂತನ ಸೇವಾಭಾವನೆ, ಸೀತೆಯನ್ನು ರಾವಣನಿಂದ ಮುಕ್ತಿಗೊಳಿಸಿ ರಾಮನಿಗೆ ಒಪ್ಪಿಸಲು ಹನುಮಂತನ ವಹಿಸಿದ ಶ್ರಮಗಳನ್ನು ಕುರಿತು ಶರೀಫರು ಸ್ತುತಿಸಿದಾಗ ಪ್ರಸಾದರೂಪದಲ್ಲಿ ಹೂಗಳು ದೊರೆಯಿತೆಂಬ ಪ್ರಸಂಗ ಉಡುಪಿಯ ಶ್ರೀಕೃಷ್ಣನ ಕೃಪಾಕಟಾಕ್ಷಕ್ಕೆ ಕನಕದಾಸರು ಪಾತ್ರರಾದುದನ್ನು ನೆನಪಿಸುತ್ತದೆ.

**"ಯಾ ಇಮಾಮ ಹಸನೈನ ಎನ್ನುತಲಿ**

ಭೂಲೋಕ ಯುಮಜಾತನಾದ ಧರ್ಮರಾಯನಾದಿಯಾಗಿ ಪಾಂಡವರು ಶಕುನಿ ಮೋಸದ ಕುತಂತ್ರಕ್ಕೆ ಬಲಿಯಾಗಿ ಸಕಲ ಸಂಪತ್ತು ಸಾಮ್ರಾಜ್ಯಗಳನ್ನು ಕಳೆದುಕೊಂಡು ೧೨ ವರ್ಷ ವನವಾಸ ಮಾಡಿ ೧೩ನೇ ವರ್ಷದ ಅಜ್ಞಾತವಾಸಕ್ಕಾಗಿ ವಿರಾಟನ ಆಸ್ಥಾನದಲ್ಲಿ ಜೀತಕ್ಕೆ ಹೋಗಿದ್ದು; ಉತ್ತರ ಪ್ರಸಂಗದಲ್ಲಿ ಅರ್ಜುನನ ಪ್ರತಾಪಗಳನ್ನು ಇಮಾಮ್ ಹಸನ್‌ಗೆ ಹೋಲಿಸುತ್ತಾ ತಿಸಿಳಿರುವುದನ್ನು ಅರಿಯಬಹುದು.

**"ಚಾರೋ ಯಾರೋ ಅಲಿ ಪಾದಕ್ಕೆರಗಿ**

ಇಲ್ಲಿ ಕೌರವನಾದ ದುರ್ಯೋಧನನು ಪಾಂಡವರ ಸುಳಿವನ್ನರಿಸಿ ವಿರಾಟರಾಜನ ರಾಜ್ಯದ ದಕ್ಷಿಣ ಭಾಗವನ್ನಾಕ್ರಮಿಸಿದಾಗ ಪಾಂಡವರಲ್ಲಿ ಧರ್ಮಜ ಕಂಕನಾಗಿ; ದ್ರೌಪದಿ ಸೈರೇಂದ್ರಿಯಾಗಿದ್ದುದು. ಕೀಚಕನ ಸಂಹಾರ ಹೀಗೆ ಅಜ್ಞಾತ ವಾಸದ ಅನೇಕ ಮಾಹಿತಿಗಳನ್ನು ಸೂಪಿ ಪಂಥದ ಕಥೆಗನುಸಾರಿಯಾಗಿ ಕಟ್ಟಿಕೊಟ್ಟಿದ್ದಾರೆ.

**"ಕರ್ಣ ಬಂದ ಕರ್ಬಲದಲ್ಲಿ ಪಾರ್ಥ**

ಮುಸ್ಲಿಂ ಕರ್ಬಲ ಕಾಳಗವನ್ನು ಕುರುಕ್ಷೇತ್ರ ಯುದ್ಧ ಕರ್ಣಾರ್ಜುನರ ಕಾಳಗಕ್ಕು ಸಂಬಂಧ ಕಲ್ಪಿಸಿ ಕೇಶವ ಬ್ರಾಹ್ಮಣ ರೂಪನಾಗಿ ಕರ್ಣನ ಕೊನೆಯ ಕ್ಷಣದಲ್ಲೂ ದಾನ ಪಡೆದು ಮೋಕ್ಷ ನೀಡಿದ ಸಂದರ್ಭಗಳೆನ್ನ ಮೊಹಬ್ಬದ ಹುಸೇನಿಗೊಳಿಸುತ್ತಾ ತಿಳಿಸಿದ್ದಾರೆ.

ಕರ್ಬಲಾ/ಕರ್ಬಲ್:–ಇರಾಕ್‌ದೇಶದ ನಡುವಿನ ಸ್ಥಳ ಕರ್ಬಲಾ ಪಟ್ಟಣದ ನೈರುತ್ಯಕ್ಕೆ ೫೫ ಮೈಲಿ ಅಂತರದಲ್ಲಿನ ಪುರಾತ್ ನದಿಯ ಪಶ್ಚಿಮ ದಡದ ಮರಳು ಭೂಮಿ. ಹಿಜರೀ ಶಕ ೬೧೮ ಮೊಹರಮ್ ತಿಂಗಳಲ್ಲಿ ಯಜೀದನ ವಿರುದ್ಧ ಸತ್ಯ, ಧರ್ಮ, ನ್ಯಾಯಕ್ಕಾಗಿತಮ್ಮಜೀವವನ್ನೇ ಬಲಿದಾನ ಮಾಡಿಅಮರರಾದಇಮಾಮ ಹಸನ್ ಹುಸೇನ ಹಾಗೂ ಅನುಯಾಆಯಿಗಳಿಂದಾಗಿ ಪವಿತ್ರ ಸ್ಥಳವಾಗಿ ಐತಿಹಾಸಿಕ ಮಹತ್ವದ ಯಾತ್ರಾಸ್ಥಳವಾಗಿದೆ.

ಶರೀಫರ ವ್ಯಕ್ತಿತ್ವ ಅಸಾಧಾರಣ, ದೈವಭಕ್ತರು, ಸಂತರು, ತತ್ವಜ್ಞಾನಿಗಳು, ಕವಿಗಳು, ಸಮಾಜಸುಧಾರಕರು, ವಿಚಾರವಾದಿಗಳು ಶರೀಫರುಯಾವ ಮತ, ಪಂಥ ಪಂಗಡಗಳಿಗೆ ಸಿಮೀತರಾಗದೆ ಸರ್ವಧರ್ಮಗಳ ಸಾರವಾದ ಪ್ರೀತಿ ಪ್ರೇಮ ಸಾಧನೆಯೊಂದಿಗೆ ಪಾರಮಾರ್ಥವನ್ನು ಸಾಧಿಸಿದರು ದೇವನೊಬ್ಬ ನಾಮ ಹಲವು; ಹರಿ–ಹರ–ಹಜರತ್ ಮಾರ್ಗಗಳೆಲ್ಲವೂ ಮಾನವನನ್ನು ದೇವನೆಡೆಗೆ ಕೊಂಡ್ಯೊಯುವ ಸಾಧನಗಳೆಂದು ಹಾಡಿ ತಿಳಿಸಿ ತನ್ಮೂಲಕ ಹಿಂದು–ಮುಸ್ಲಿಂ ಸಂಸ್ಕೃತಿಯ ಐಕಮತ್ಯಕ್ಕೆ ಕಾರಣಕರ್ತರಾಗಿ ಯಾವುದೊಂದು 'ಪಂಥ' ನಿರ್ಮಿಸದಿರುವುದು ಗಮನಾರ್ಹ.

**ಪರಾಮರ್ಶನಗಳು**


1. ಬರಕೋ ಪದಾ ಬರಕೋ–೧೯೮೧, ಸಂಪಾದಕರು–ಡಾ.ಶಿವಾನಂದ ಗುಬ್ಬಣ್ಣವರ, ಅಖಿಲ ಭಾರತ ೭೭ನೇ ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಕಟಣೆ, ಪುಟ–(ಫಿಫಿಫಿಖಫಿ–ಫಿಖ) ಕ.ಸಾ.ಪ
2. ಮೇಲಿನದೇ ಪುಟ–೩೨೩
3. ಪ್ರಜಾವಾಣಿ ಮೆಟ್ರೊ, ಕರ್ನಾಟಕ ದರ್ಶನ, ಪುಟ–೩, ಮಂಗಳವಾರ ೧೦–೯–೨೦೧೯
4. ಪಾಠ–೧, ಸಂಸ್ಕೃತಿ: ಕೆಲವು ವಿಚಾರಗಳು, ಡಾ.ಎಂ.ಎ. ಜಯಚಂದ್ರ, ದ್ವಿತೀಯ ಎಂ.ಎ. ಕನ್ನಡ ಮಾರ್ಗದರ್ಶಿ ಅಭ್ಯಾಸ
5. ಯೂಟುಬ್ ೨೨ ಮೇ ೨೦೧೮, ಸಂತ ಶಿಶುನಾಳ ಶರೀಫ ತತ್ವಪದಗಳು ವ್ಯಾಖ್ಯಾನ, ಭಾಗ–೧, ಗುರುರಾಜ ಕರ್ಜಗಿ.
6. ಯೂಟುಬ್ ೧ ಜೂನ್ ೨೦೧೮, ಸಂತ ಶಿಶುನಾಳ ಶರೀಫ ತತ್ವಪದಗಳು ವ್ಯಾಖ್ಯಾನ, ಭಾಗ–೨, ಗುರುರಾಜ ಕರ್ಜಗಿ.
7. ಯೂಟುಬ್ ೭ ಜೂನ್ ೨೦೧೮, ಸಂತ ಶಿಶುನಾಳ ಶರೀಫ ತತ್ವಪದಗಳು ವ್ಯಾಖ್ಯಾನ, ಭಾಗ–೩, ಗುರುರಾಜ ಕರ್ಜಗಿ.